ಉದಾಹರಣೆಗಳನ್ನು ನಾವು ನೋಡಬಹುದು.

## 'ಲ್ಯಾಬ್ ಲೀಕ್' ದುರಂತಗಳು

ಇತಿಹಾಸದಲ್ಲಿ ಹಲವು ಬಾರಿ ಸಂಶೋಧಕರ ನಿಯಂತ್ರಣ ಮೀರಿ ನಡೆದ ಪ್ರಯೋಗಗಳು ಹಲವಾರು ದುರಂತಕ್ಕೆ ನಾಂದಿ ಹಾಡಿವೆ. ತೀರಾ ಇತ್ತೀಚಿನ ಕೆಲವು ಘಟನೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

- ಚೀನಾದ ಗ್ವಾಂಗ್ಡಾಂಗ್ ಪ್ರಾಂತ್ಯದಲ್ಲಿ (2002ರಲ್ಲಿ) ಸಾರ್ಸ್ (Severe Acute Respiratory syndrome) ಸಂಬಂಧಿತ ಕೊರೊನಾ (SARS–CoV) ವೈರಾಣುವೊಂದು ಸೋರಿಕೆಯಾದ ಪರಿಣಾಮ ಐದು ಖಂಡಗಳಿಗೆ ಸೇರಿದ 33 ದೇಶಗಳಲ್ಲಿ 8450ಕ್ಕೂ ಹೆಚ್ಚು ಜನರಿಗೆ ಈ ರೋಗ ಹರಡಿತ್ತು. 2003ರಲ್ಲಿ ರೋಗವನ್ನು ನಿಯಂತ್ರಣಕ್ಕೆ ತರಲಾಗಿತ್ತು.
- 2003ರಲ್ಲಿ ಸಿಂಗಪುರದ ಪ್ರಯೋಗಾಲಯವೊಂದರಲ್ಲಿ ಸಂಶೋಧಕರೊಬ್ಬರು ತಾವು ಸಂಶೋಧನೆಯಲ್ಲಿ ತೊಡಗಿದ್ದ ಸಾರ್ಸ್ ರೋಗ ತರುವ ರೋಗಾಣುವಿನ ಸಂಪರ್ಕಕ್ಕೆ ಆಕಸ್ಮಿಕವಾಗಿ ಒಳಗಾದರು. ಆಗ ಸಾಂಕ್ರಾಮಿಕ ರೋಗದ ಭಯ ಇಡೀ ದೇಶವನ್ನೇ ಕಂಗೆಡಿಸಿತ್ತು.
- 2004ರಲ್ಲಿ ಶ್ವಾಸಕೋಶ ಸಂಬಂಧಿ ಸಮಸ್ಯೆಯನ್ನು ತಂದೊಡ್ಡುವ ಸಾರ್ಸ್ ವೈರಾಣು ಚೀನಾದ ಬೀಜಿಂಗ್‌ನಲ್ಲಿರುವ ಪ್ರಯೋಗಾಲಯವೊಂದರಿಂದ ಸೋರಿಕೆಯಾಯಿತು. ಅದರ ಪರಿಣಾಮ, ಒಬ್ಬರು ಸಾವನ್ನಪ್ಪಿದ್ದು ವರದಿಯಾಗಿತ್ತು.

ಹೀಗೆ ಇತಿಹಾಸದ ಪುಟಗಳನ್ನು ತೆರೆಯುತ್ತಾ ಹೋದರೆ, ಪ್ರಯೋಗಾಲಯದಿಂದ ಅಚಾನಕ್ಕಾಗಿ ಸೋರಿಕೆಯಾದ ಅಥವಾ ಉದ್ದೇಶಪೂರ್ವಕವಾಗಿ ಸೋರಿಕೆ ಮಾಡಿದ ಅನೇಕ ಪ್ರಕರಣಗಳು ಸಿಗುತ್ತವೆ.

ಇತ್ತೀಚಿನ ಉದಾಹರಣೆಗಳನ್ನೇ ಗಮನಿಸುವುದಾದರೆ, 2019ರಲ್ಲಿ ದನ, ಕರುಗಳಂತಹ ಪ್ರಾಣಿಗಳಲ್ಲಿ 'ಬ್ರುಸೆಲ್ಲೊಸಿಸ್' ಎಂಬ ರೋಗ ತರುವ, 'ಬ್ರುಸೆಲ್ಲಾ' ಜಾತಿಗೆ ಸೇರಿದ ಬ್ಯಾಕ್ಟೀರಿಯಾವೊಂದಕ್ಕೆ ಲಸಿಕೆಯನ್ನು ತಯಾರಿಸುವ ಸಂದರ್ಭದಲ್ಲಿ, ಪ್ರಯೋಗಾಲಯದಿಂದ ರೋಗಾಣು ಸೋರಿಕೆಯಾಯಿತು. ಅದರ ಪರಿಣಾಮ 3000 ಜನರು ಅನಾರೋಗ್ಯಕ್ಕೆ ತುತ್ತಾಗಿದ್ದರು.

ಮೇಲಿನ ಎಲ್ಲ ಪ್ರಸಂಗಗಳು ನಡೆದದ್ದು ಪ್ರಯೋಗಾಲಯಗಳಲ್ಲೇ. ಸೋರಿಕೆಯಾದ ಜೀವಿಗಳು ಮನುಷ್ಯನನ್ನು ಇನ್ನಿಲ್ಲದ ರೀತಿಯಲ್ಲಿ ತೊಂದರೆಗೆ ಒಡ್ಡಿದ್ದನ್ನು ಮನಗಂಡ ಕೆಲವರು, ಆ ರೋಗಾಣುಗಳನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿದ್ದೂ ಇದೆ.

## ಜೈವಿಕ ಭಯೋತ್ಪಾದನೆ

ವಿಧ್ವಂಸಕ ಕೃತ್ಯಗಳ ಭಯೋತ್ಪಾದನೆ ಬಲ್ಲೆವು. ಏನಿದು ಜೈವಿಕ ಭಯೋತ್ಪಾದನೆ?

ಅಪಾಯಕಾರಿ ವೈರಾಣುಗಳು, ರೋಗಕಾರಕ ಬ್ಯಾಕ್ಟೀರಿಯಾಗಳು, ಹಾಗೂ ವಿಷಕಾರುವ ಶಿಲೀಂಧ್ರಗಳಂತಹ ಸೂಕ್ಷ್ಮಾಣು ಜೀವಿಗಳನ್ನು ಬಳಸಿ ರೋಗವನ್ನು ಹರಡುವ ಮೂಲಕ ಸಾಮೂಹಿಕವಾಗಿ ಜೀವಹಾನಿ ಮಾಡುವ ಉದ್ದೇಶಪೂರ್ವಕ ಕೃತ್ಯಕ್ಕೆ 'ಜೈವಿಕ ಭಯೋತ್ಪಾದನೆ' ಎನ್ನಬಹುದು. ಯುದ್ಧಗಳು ನಡೆಯುವ ಸಂದರ್ಭದಲ್ಲಿ ಸೂಕ್ಷ್ಮಾಣು ಜೀವಿಗಳನ್ನು ಅಸ್ತ್ರವನ್ನಾಗಿ ಬಳಸಿದರೆ ಅಂತಹ ಯುದ್ಧಗಳನ್ನು 'ಜೈವಿಕ

### ಮಳೆ ಹನಿಯಲ್ಲಿ ಜೀವಾಣು ಬಾಂಬ್

1970ರ ಸುಮಾರಿಗೆ ಅಮೆರಿಕದ ಹಲವೆಡೆ 'ಹಳದಿ ಮಳೆ'ಯಾಗಿತ್ತು. ಮಳೆ ಹನಿಗೆ ತೆರೆದುಕೊಂಡವರೆಲ್ಲ ರೋಗಗಳಿಗೆ ತುತ್ತಾಗಿದ್ದರು. ರಷ್ಯಾ ಹಾಗೂ ಅಮೆರಿಕ ನಡುವಿನ ಶೀತಲ ಸಮರದಲ್ಲಿ ರಷ್ಯಾವು ಅಮೆರಿಕದ ಮೇಲೆ ಜೈವಿಕ ಬಾಂಬ್ ಬಳಸಿದ್ದೇ ಇದಕ್ಕೆ ಕಾರಣವಾಗಿತ್ತು. ಟ್ರೈಕೋಥೆಸಿನ್ ಎಂಬ ವಿಷವನ್ನು ಬಿಡುಗಡೆ ಮಾಡುವ ಶಿಲೀಂಧ್ರವನ್ನು ಮಳೆಯಲ್ಲಿ ವಿಜ್ಞಾನಿಗಳು ಪತ್ತೆ ಹಚ್ಚಿದ್ದರು.



ಉನ್ನತ ದರ್ಜೆಯ ಪ್ರಯೋಗಾಲಯಗಳ ಪ್ರವೇಶವೆಂದರೆ ಚಕ್ರವ್ಯೂಹ ಹೊಕ್ಕಂತೆ